MAY 02,2025

ALL INDIA RADIO- DHARWAD

PRADESH SAMACHARA (KANNADA) 12PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಅಂತಾರಾಷ್ಟ್ರೀಯ ಕಾರ್ಮಿಕರ ದಿನದ ಹಿನ್ನೆಲೆ, 'ಕಾರ್ಮಿಕರ ಸುರಕ್ಷತೆ ಹಾಗೂ ಆರೋಗ್ಯ ರಕ್ಷಣೆ' ಧ್ಯೇಯದೊಂದಿಗೆ, 'ಶ್ರಮಿಕ್ ದಿವಸ್' ಅಥವಾ 'ಕಾಮಗರ್ ದಿನ' ಆಚರಿಸಲಾಯಿತು.

<><><>

ವಿಶ್ವ ಕಾರ್ಮಿಕ ದಿನಾಚರಣೆ ಹಿನ್ನೆಲೆ, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ, ನಿನ್ನೆ ಮೇ 1ನೇ ತಾರೀಖಿನಿಂದ, 'ದುಡಿಯೋಣ ಬಾ' ಅಭಿಯಾನಕ್ಕೆ, ರಾಜ್ಯಾದ್ಯಂತ ಚಾಲನೆ ನೀಡಲಾಗಿದೆ. ಗದಗ ಜಿಲ್ಲೆ, ನರಗುಂದ ತಾಲೂಕು, ಕೊಣ್ಣೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ, ಸಾಮೂಹಿಕ ಬದು ನಿರ್ಮಾಣ ಕಾಮಗಾರಿ ಸ್ಥಳದಲ್ಲಿ, ದುಡಿಯೋಣ ಬಾ, ಸ್ತ್ರೀ ಚೇತನ ಅಭಿಯಾನ ಹಾಗೂ ವಿಶ್ವ ಕಾರ್ಮಿಕರ ದಿನಾಚರಣೆ ಜರುಗಿತು. ಗ್ರಾಮ ಕಾಯಕ ಮಿತ್ರರು, ಕಾಯಕ ಬಂಧುಗಳು ಪಾಲ್ಗೊಂಡಿದ್ದರು.

<><><>

ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ, ಮುಂಡ್ರಿಗಿ ನಾಗರಾಜ, ಬಳ್ಳಾರಿಯಲ್ಲಿ ಕಾರ್ಮಿಕ ದಿನಾಚರಣೆಯಲ್ಲಿ ಪಾಲ್ಗೊಂಡು, ಶ್ರಮಜೀವಿಗಳನ್ನು ಸನ್ಮಾನಿಸಿದರು.

<><><>

<><><>

ವೇವ್ಸ್ ಶೃಂಗಸಭೆ ಧ್ಯೇಯ ಸಂಗೀತ 10 ಸೆಕೆಂದುಗಳು

<><><>

ಜಾಗತಿಕ ಶ್ರಾವ್ಯ, ದೃಶ್ಯ ಮತ್ತು ಮನೋರಂಜನಾ ಶೃಂಗಸಭೆ, #WAVES ಸಂಸ್ಕೃತಿ, ಸೃಜನಶೀಲತೆ ಮತ್ತು ಜಾಗತಿಕ ಸಂಪರ್ಕದೊಂದಿಗೆ ಕಾರ್ಯವೆಸಗುತ್ತಿದೆ. ಭಾರತ ಸರ್ಕಾರ, WAVES ವೇದಿಕೆ ಮೂಲಕ, ಯುವ ಸೃಷ್ಟಿಕರ್ತರ ಶ್ರಮ ಮತ್ತು ಉತ್ಸಾಹವನ್ನು ಬೆಂಬಲಿಸಿ, ಸೃಜನಶೀಲತೆಯ ಅಲೆಯನ್ನು ಸೃಷ್ಟಿಸುತ್ತಿದೆ, ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ನುಡಿದರು. ಮುಂಬಯಿಯ, ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ, ನಾಲ್ಕು ದಿನಗಳ ಕಾಲ ಆಯೋಜಿತ, ವೇವ್ಸ್ ಶೃಂಗಸಭೆ ಉದ್ಘಾಟಿಸಿ, ಅವರು, ಮಾತನಾಡಿದರು.

<><><>

ಪ್ರಧಾನಮಂತ್ರಿ ಮೋದಿ ಧ್ವನಿ – 33 ಸೆಕೆಂದುಗಳು

<><><>

<><><>

ವೇವ್ಸ್ ಶೃಂಗಸಭೆ ಧ್ಯೇಯ ಸಂಗೀತ 10 ಸೆಕೆಂದುಗಳು

<><><>

ಎಸ್.ಎಸ್.ಎಲ್.ಸಿ. ಪರೀಕ್ಷೆ – 1 ರ ಫಲಿತಾಂಶ, ಇಂದು ಮಧ್ಯಾಹ್ನ 12.30ಕ್ಕೆ ಜಾಲತಾಣ, kar results.nic.in ನಲ್ಲಿ ಪ್ರಕಟವಾಗಲಿದೆ. ಈ ಬಾರಿ 8 ಲಕ್ಷ 96 ಸಾವಿರದ 447 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಎಸ್.ಎಮ್.ಎಸ್. ಸಂದೇಶವನ್ನು, KAR 10 ಅಂತ ಬರೆದು, ಸ್ಪೇಸ್ ಬಿಟ್ಟು ನೋಂದಣಿ ಸಂಖ್ಯೆ ಟೈಪ್ ಮಾಡಿ, 56263ಕ್ಕೆ ಸಂದೇಶ ಕಳುಹಿಸಿದರೆ, ಫಲಿತಾಂಶ, ಅದೇ ಮೊಬೈಲ್ ಸಂಖ್ಯೆಗೆ ಬರಲಿದೆ.

<><><>

ಇಂದು ನಾಡಿನಾದ್ಯಂತ ಅದ್ವೈತ ತತ್ವ ಪ್ರತಿಪಾದಕ, ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ. ಬಳ್ಳಾರಿ ನಗರದ ಸಂಕನಕಲ್ಲು ಶಾರದಾ ಶಂಕರ ಮಠದಲ್ಲಿ, ಶಂಕರ ಜಯಂತಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ನಗರದ ವೆಂಟರಮಣ ದೇವಸ್ಥಾನದಿಂದ ಹೊರಟ ಶಂಕರಾಚಾರ್ಯರ ಭಾವಚಿತ್ರದ ಶೋಭಾಯಾತ್ರೆಗೆ ಶಾಸಕ ಭರತ ರೆಡ್ಡಿ ಚಾಲನೆ ನೀಡಿದರು.

<><><>

ಭಾರತೀಯ ಅಂಚೆ ಇಲಾಖೆ, "ಜ್ಞಾನ ಅಂಚೆ" ಎಂಬ, ಹೊಸ ಅಂಚೆ ಸೇವೆಯನ್ನು, ಮೇ 1 ರಿಂದ, ಆರಂಭಿಸಿದೆ. ವಿದ್ಯಾರ್ಥಿಗಳು, ಓದುಗರು ಮತ್ತು ಪಠ್ಯ ಪುಸ್ತಕ ಪ್ರಕಾಶಕರು, ಕೈಗೆಟುಕುವ ದರದಲ್ಲಿ, ಪುಸ್ತಕಗಳನ್ನು ಈ ವಿಶೇಷ ಅಂಚೆ ಮೂಲಕ, ರವಾನಿಸಬಹುದು. ಪಠ್ಯಪುಸ್ತಕಗಳು, ಸಾಂಸ್ಕೃತಿಕ, ಧಾರ್ಮಿಕ ಪುಸ್ತಕಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ಕೈಪಿಡಿಯಂತಹ, ಮುದ್ರಿತ ಪುಸ್ತಕಗಳನ್ನು, ಕನಿಷ್ಟ ತೂಕ 300 ಗ್ರಾಂ ಮತ್ತು ಗರಿಷ್ಟ 5 ಕಿಲೋ ವರೆಗೂ, ಕಳುಹಿಸಬಹುದು. ಬಳ್ಳಾರಿ ಪ್ರಧಾನ ಅಂಚೆ ಕಚೇರಿಯಲ್ಲಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಿಷ್ಠಿ ರುದ್ರಪ್ಪ, ಜ್ಞಾನ ಅಂಚೆ ಮೂಲಕ, ಒಂದು ಪುಸ್ತಕ ರವಾನಿಸಿ, ಮೊದಲ ಗ್ರಾಹಕರಾದರು. ಬಳ್ಳಾರಿ ವಿಭಾಗದ ಅಂಚೆ ಅಧೀಕ್ಷಕ ಪದ್ಮಶಾಲಿ ಚಿದಾನಂದ, ಜ್ಞಾನ ಅಂಚೆ ಸೇವೆಯನ್ನು ಉದ್ಘಾಟಿಸಿದರು.

<><><>

ಗದಗ ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ, 'ಜ್ಞಾನ ಅಂಚೆ' ಸೇವೆಗೆ ಗದಗ ವಿಭಾಗೀಯ ಅಂಚೆ ಅಧೀಕ್ಷಕ, ಜಯದೇವ ಕಡಗಿ ಚಾಲನೆ ನೀಡಿದರು.

<><><>

ವಿಜಯಪುರ ಜಿಲ್ಲೆಯ, ನಗರ ಹಾಗೂ ಗ್ರಾಮೀಣ ಭಾಗದಲ್ಲಿ, ಬೇಸಿಗೆ ಸಂದರ್ಭದಲ್ಲಿ, ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸದಂತೆ, ಸಮಗ್ರ ಯೋಜನೆ ರೂಪಿಸಿ, ಮುಂಜಾಗ್ರತೆಯಿಂದ ಅನುಷ್ಟಾನಗೊಳಿಸುವಂತೆ, ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿ, ಉಜ್ವಲ್‌ಕುಮಾರ ಘೋಷ್ ಜಿಲ್ಲಾಡಳಿತಕ್ಕೆ, ಸೂಚಿಸಿದ್ದಾರೆ. ವಿಜಯಪುರ ಮಹಾನಗರ ಪಾಲಿಕೆ ಕಚೇರಿಯ ಸಭಾಂಗಣದಲ್ಲಿ ಅವರು, ಪ್ರಗತಿ ಪರಿಶೀಲನಾ ಸಭೆ, ನಡೆಸಿದರು. ಕುಡಿಯುವ ನೀರು ಪೂರೈಕೆಯಲ್ಲಿ, ತಾಂತ್ರಿಕ ಸಮಸ್ಯೆ ಎದುರಾದಲ್ಲಿ, ತ್ವರಿತವಾಗಿ ಪರ್ಯಾಯ ಕ್ರಮ ಕೈಗೊಂಡು, ಸಕಾಲದಲ್ಲಿ ಪೂರೈಸಲು ಕ್ರಮ ಕೈಗೊಳ್ಳುವಂತೆ, ಅವರು ನಿರ್ದೇಶಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>